**ಸಾಕ್ಷಿಯನ್ನು ದಿನಾಂಕಃ 25.01.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ಜೆ.ಎಸ್. ವಕೀಲರಿಂದಃ**

ನಾನು 7 ನೇ ತರಗತಿವರೆಗು ಓದಿರುತ್ತೇನೆ. ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ, ಇಂಗ್ಲೀಷ್ ಬರುವುದಿಲ್ಲ. ನಾನು ನನ್ನ ಸಹಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮಾಡುತ್ತೇನೆಂದರೆ ಸರಿ. ವಾದಿಯರು ಏನು ಬೇಡಿ ದಾವೆ ಮಾಡಿರುತ್ತಾರೆಂದರೆ ಸಾಕ್ಷಿಯು ಮೌನ ಇರುತ್ತಾರೆ. ತಮ್ಮ ಪ್ರತಿವಾದ ಪತ್ರ ತಯಾರು ಮಾಡಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನಾನೇ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಷಯ ನನಗೆ ಗೊತ್ತು ಎಂದರೆ ಸರಿ. ತಾವು ಹಾಜರುಮಾಡಿರುವ ದಾಖಲೆಗಳನ್ನು ನೋಡಿ ಪರಿಶೀಲಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಗಂಡನಿಗೆ 02 ಜನ ಸಹೋದರರು ಮತ್ತು 03 ಜನ ಸಹೋದರಿಯರು, ಒಟ್ಟು 06 ಜನ. ಅವರುಗಳ ಹೆಸರನ್ನು ನಾನು ಹೇಳಬಲ್ಲೆ. ಅವರುಗಳೆಂದರೆ ಚಿಕ್ಕಣ್ಣನಾಯಕ, ಕೆಂಪಸಿದ್ದಮ್ಮ, ಲಕ್ಷ್ಮಮ್ಮ, ಬಿಳಿನಾಯಕ – ನನ್ನ ಗಂಡ, ಕಾಳಸ್ವಾಮಿನಾಯಕ ಮತ್ತು ಕಾಳಸಿಂಗಮ್ಮ. ನನ್ನ ಗಂಡನ ತಂದೆಯ ಹೆಸರು ಸಿಂಗನಾಯಕ. ನಾನೇ ಹಾಜರುಮಾಡಿರುವ ನಿ.ಡಿ.-4 – ಪಾಲು ಪಟ್ಟಿಯಲ್ಲಿ ನನ್ನ ಗಂಡನ ತಂದೆಯ ಹೆಸರು ಚಿಕ್ಕಕೊಮ್ಮನಾಯಕ ಎಂದು ಇರುತ್ತದೆ ಎಂದರೆ ಸಾಕ್ಷಿಯು ಚಿಕ್ಕಕೊಮ್ಮನಾಯಕ ಮತ್ತು ಸಿಂಗನಾಯಕ ಎಂಬ ಎರಡೂ ಹೆಸರುಗಳು ಇರುತ್ತವೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿ.ಡಿ.-4 – ಪಾಲುಪಟ್ಟಿ ತೋರಿಸಿ ಅದರಲ್ಲಿ ನನ್ನ ಗಂಡನ ತಂದೆಯ ಹೆಸರು ಚಿಕ್ಕಕೊಮ್ಮನಾಯಕ ಎಂಬ ಒಂದೇ ಹೆಸರಿನಲ್ಲಿ ಇರುತ್ತದೆಂದರೆ ಸಾಕ್ಷಿಯು ನೋಡಿ ಹೌದು ಎಂದು ಒಪ್ಪಿ ಮುಂದುವರಿದು ಸಿಂಗನಾಯಕ

ಎಂಬ ಅಡ್ಡ ಹೆಸರಿನಿಂದಲೂ ಕರೆಯುತ್ತಾರೆಂದು ನುಡಿಯುತ್ತಾರೆ. ತಮ್ಮ ಮಾವನ ಹೆಸರು ಚಿಕ್ಕಕೊಮ್ಮನಾಯಕ ಮತ್ತು ಸಿಂಗನಾಯಕ ಎಂಬ ಎರಡೂ ಹೆಸರುಗಳಿಂದಲೂ ಕರೆಯುತ್ತಿದ್ದರು ಎಂದು ದಾಖಲೆಗಳನ್ನು ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನೇರಳೆ ಗ್ರಾಮದ ಸ.ನಂ. 168 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 03 ಎಕರೆ 25 ಗುಂಟೆ ಎಂದು ನುಡಿಯುತ್ತಾರೆ. ಸದರಿ ಸ.ನಂ. ಆಸ್ತಿಯು ತಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತದೆಂದರೆ ಸಾಕ್ಷಿಯು ಸದರಿ ಆಸ್ತಿ ನನ್ನ ಮಾವನ ತಂದೆಯ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಮಾವನ ತಂದೆಯ ಹೆಸರು ಕೊಮ್ಮನಾಯಕ. ತಮ್ಮ ಮಾವನ ತಂದೆಯ ಹೆಸರು ಕೊಮ್ಮನಾಯಕ, ತಮ್ಮ ಮಾವನ ಹೆಸರು ಸಿಂಗನಾಯಕ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ವಂಶವೃಕ್ಷ ಹಾಜರುಪಡಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಹಾಜರುಮಾಡಿರುವ ದಾಖಲೆಗಳಲ್ಲಿ ವಂಶವೃಕ್ಷ ಇಲ್ಲಾ ಎಂದರೆ ಸರಿಯಲ್ಲ. ತಮ್ಮ ಮಾವನ ಮತ್ತು ತಮ್ಮ ಗಂಡನ ಮರಣ ಪ್ರಮಾಣ ಪತ್ರಗಳನ್ನು ಹಾಜರುಮಾಡಿದ್ದೀರಾ ಎಂದರೆ ಸಾಕ್ಷಿಯು ಮುಂದಿನ ದಿನಾಂಕ ಕೊಡುತ್ತೇವೆ ಎಂದು ನುಡಿಯುತ್ತಾರೆ. ತಮ್ಮ ಪ್ರತಿವಾದ ಪತ್ರದಲ್ಲಿ ದಾವಾ ಆಸ್ತಿಯು ನನ್ನ ಗಂಡನಿಗೆ ಪಿತ್ರಾರ್ಜಿತ ಆಸ್ತಿ ಎಂದು ಬರೆಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸ.ನಂ. 168 ರ ಜಮೀನು ಈಗ ಎಷ್ಟು ಪೋಡಾಗ ಮಾರ್ಪಾಡಾಗಿದೆ ಎಂದರೆ ಸಾಕ್ಷಿಯು 03 ಎನ್ನುತ್ತಾರೆ. ಸ.ನಂ. 168/2 ರಲ್ಲಿ 02 ಎಕರೆ 06 ಗುಂಟೆ – 04 ಗುಂಟೆ ಕರಾಬು ಕಳೆದು ಇನ್ನ 02 ಎಕರೆ 02 ಗುಂಟೆ, ಸ.ನಂ. 168/1ಎ ನಲ್ಲಿ 28 ಗುಂಟೆ ಮತ್ತು ಸ.ನಂ. 168/1ಬಿ ನಲ್ಲಿ 07 ಗುಂಟೆ ಎಂದು

ನುಡಿಯುತ್ತಾರೆ. ಸದರಿ ಜಮೀನುಗಳಿಗೆ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿಯ ಸದರಿ ಜಮೀನುಗಳು ಒಂದೇ ಕಡೆ ಇರುತ್ತವೆಂದು ನುಡಿಯುತ್ತಾರೆ. ಸ.ನಂ. 168 03 ಪೋಡಾಗಿರುವುದಿಲ್ಲ, ಬದಲಾಗಿ 04 ಪೋಡುಗಳಾಗಿವೆ ಎಂದರೆ ಸರಿ. ಸ.ನಂ. 168/2, 168/1 ಎ ಮತ್ತು 168/1 ಬಿ ನನ್ನ ಗಂಡನಿಗೆ ಬಂದಿರುತ್ತದೆ. ಪ್ರಸ್ತುತ ನನ್ನ ಹೆಸರಿಗೆ ಸದರಿ ಸ.ನಂ. ಆಸ್ತಿಗಳು ಪೌತಿ ಮೇರೆಗೆ ಖಾತೆ ಆಗಿರುತ್ತದೆ. ಸ.ನಂ. 168/1 ಸಿ ವೆಂಕಟನಾಯಕರವರಿಗೆ ಖಾತೆ ಆಗಿರುತ್ತದೆ. ಸ.ನಂ. 168/2 ರ ಜಮೀನಿಗೆ ಚಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಪೂರ್ವಕ್ಕೆ – ಛತ್ರಿ ಚಿಕ್ಕಣರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ – ಬೆಟ್ಟನಾಯಕರವರಿಗೆ ಸೇರಿದ ಜಮೀನು ಮತು ಕಬಿನಿ ನದಿ, ಉತ್ತರಕ್ಕೆ – ಓಣಿ ಮತ್ತು ದಕ್ಷಿಣಕ್ಕೆ – ಎಲ್.ಐ.ಸಿ. ಗೋಪಾಲ ಮತ್ತು ಈಶ್ವರ ಇವರಿಗೆ ಸೇರಿದ ಜಮೀನು. ಸ.ನಂ.168/1 ಎ ಜಮೀನಿಗೆ ಚೆಕ್ಕುಬಂದಿ – ಪೂರ್ವಕ್ಕೆ ವೆಂಕಟನಾಯಕರವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ – ಕಬಿನಿ ಜಲಾಶಯ, ಉತ್ತರಕ್ಕೆ ಓಣಿ ಮತ್ತು ದಕ್ಷಿಣಕ್ಕೆ ನಮಗೆ ಸೇರಿದ ಸ.ನಂ. 168/2 ರ ಜಮೀನು. ಸ.ನಂ.168/1 ನ ಬಿ ಗೆ ಜಮೀನಿಗೆ ಚೆಕ್ಕುಬಂದಿ ಹೇಳುವಿರಾ ಎಂದರೆ ಸಾಕ್ಷಿಯು .ನಂ. 168/1 ರಲ್ಲಿ ಬರುವ ಚೆಕ್ಕುಬಂದಿಯೇ ಇರುತ್ತದೆಂದು ನುಡಿಯುತ್ತಾರೆ. ನಿ.ಡಿ.–10 –ನಕ್ಷೆಯನ್ನು ನಾನೇ ಹಾಜರುಪಡಿಸಿರುತ್ತೇನೆಂದರೆ ಸರಿ. ಸ,ನಂ. 168/2 ರ ಜಮೀನಿನ ಉತ್ತರ ಭಾಗಕ್ಕೆ ಸ.ನಂ. 168/1 ಎ, 168/1 ಬಿ ಮತ್ತು 168/1 ಸಿ ಜಮೀನುಗಳು ಇರುತ್ತವೆಂದರೆ ಸರಿ. ಸ.ನಂ. 168/1 ಎ, 168/1 ಬಿ ಮತ್ತು 168/1 ಸಿ ಜಮೀನುಗಳು ಮೂಲವಾಗಿ ಚಿಕ್ಕಮರಿನಾಯಕ ಮತ್ತು ಕೊಮ್ಮನಾಯಕ ಅವರಿಗೆ ಸೇರಿದ ಜಮೀನುಗಳು ಎಂದರೆ

ಸಾಕ್ಷಿಯು ಕೊಮ್ಮನಾಯಕರವರಿಗೆ ಸೇರಿದ ಜಮೀನುಗಳು ಎಂದು ನುಡಿಯುತ್ತಾರೆ. ಸ.ನಂ. 168/2ರ ಜಮೀನಿನ ಉತ್ತರ ದಿಕ್ಕಿಗೆ ಓಣಿ ಇಲ್ಲ ಬದಲಾಗಿ ಸ.ನಂ. ಸ.ನಂ. 168/1ಎ, 168/1ಬಿ ಮತ್ತು 168/1ಸಿ ಜಮೀನುಗಳು ಇರುತ್ತವೆ ಎಂದರೆ ಸಾಕ್ಷಿಯು ರಸ್ತೆ ಮತ್ತು ಸದರಿ ಸ.ನಂ. ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. ಸ.ನಂ. 168/2 ರ ಜಮೀನಿನ ಉತ್ತರ ದಿಕ್ಕಿಗೆ ರಸ್ತೆ ಇಲ್ಲಾ ಎಂದರೆ ಸರಿ. ರಸ್ತೆ ಕಳೆದ ನಂತರ ಜಮೀನುಗಳಿರುತ್ತವೆಂದರೆ ಸರಿ. ಸ.ನಂ. 168/2ರ ಪೂರ್ವಕ್ಕೆ – ವೀರನಾಯಕರವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಛತ್ರಿ ಚಿಕ್ಕಣ್ಣನಾಯಕರವರಿಗೆ ಸೇರಿದ ಜಮೀನು ಇರುತ್ತದೆಂದು ನುಡಿಯುತ್ತಾರೆ. ಸ.ನಂ. 168/2ರ ಪಶ್ಚಿಮಕ್ಕೆ – ದೊಡ್ಡಚೆನ್ನನಾಯಕರವರ ಜಮೀನು ಇರುತ್ತದೆಂದರೆ ಸರಿಯಲ್ಲ. ಸ.ನಂ. 168/2ರ ದಕ್ಷಿಣ ದಿಕ್ಕಿಗೆ ಶಿವನ ಮಾದನಾಯಕರವರಿಗೆ ಸೇರಿದ ಜಮೀನು ಇದೆ ಎಂದರೆ ಸರಿಯಲ್ಲ. ಸ.ನಂ. 168/2 ರ ಆಸ್ತಿಯು ಮೃತ ನನ್ನ ಗಂಡನ ಪಿತಾರ್ಜಿತ ಆಸ್ತಿ ಅಲ್ಲಾ ಎಂದರೆ ಸರಿಯಲ್ಲ. ನನ್ನ ಮಾವನ ಹೆಸರು ಸಿಂಗನಾಯಕ ಅಲ್ಲಾ ಎಂದರೆ ಸಾಕ್ಷಿಯು ಸಿಂಗನಾಯಕ ಮತ್ತು ಚಿಕ್ಕಕೊಮ್ಮನಾಯಕ ಎರಡೂ ಹೆಸರುಗಳು ಇರುತ್ತವೆಂದರೆ ನುಡಿಯುತ್ತಾರೆ. ನಿ.ಡಿ.-8ರಲ್ಲಿ ಇರುವ ಸಿಂಗನಾಯಕ ಬಿನ್ ಕೊಮ್ಮನಾಯಕರವರ ಹೆಸರಿನ ಮುಂದೆ ಆರ್.ಆರ್. 146/68-69 ಎಂದು ನಮೂದಾಗಿದ್ದು ಸದರಿ ದಾಖಲೆಯನ್ನು ತಂದು ಹಾಜರುಮಾಡಲು ತೊಂ ದರೆ ಇದೆಯಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತರೆ. ಸಿಂಗನಾಯಕ ಬಿನ್ ಕೊಮ್ಮನಾಯಕರವರ ಹೆಸರಿನಲ್ಲರುವ ಜಮೀನುಗಳು ನಮ್ಮ ಯಾವುದೇ ರೀತಿಯಲ್ಲೂ ಸೇರುವುದಿಲ್ಲ ಎಂದರೆ

ಸರಿಯಲ್ಲ. ಸಿಂಗನಾಯಕ ಬಿನ್ ಕೊಮ್ಮನಾಯಕರವರು ಯಾವುದೇ ರೀತಿಯಲ್ಲೂ ನಮ್ಮ ಕುಟುಂಬದ ಸದಸ್ಯರಲ್ಲಾ ಎಂದರೆ ಸರಿಯಲ್ಲ. ಸಿಂಗನಾಯಕ ಬಿನ್ ಕೊಮ್ಮನಾಯಕ ಇವರು ನಮ್ಮ ಕುಟುಂಬದ ಸದಸ್ಯರೇ ಆಗಿದ್ದರೆ ವಂಶವೃಕ್ಷ ಹಾಜರುಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕೊಮ್ಮನಾಯಕರವರ ತಂದೆಯ ಹೆಸರೇನು ಎಂದರೆ ಸಾಕ್ಷಿಯು ಅವರ ಹೆಸರೂ ಕೊಮ್ಮನಾಯಕ ಎಂದು ನುಡಿಯುತ್ತಾರೆ.

1 ನೇ ವಾದಿಯ ಪುಟ್ಟಮ್ಮ ನನಗೆ ಗೊತ್ತಿಲ್ಲ. ಇನ್ನುಳಿದ ವಾದಿಯರು ನನಗೆ ಗೊತ್ತು. 1 ನೇ ವಾದಿಯ ತಂದೆ ಬಸವನಾಯಕ ಗೊತ್ತಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಯರು ದಾವೆ ಮಾಡಿದ ನಂತರ ತಮಗೆ ನ್ಯಾಯಾಲಯದಿಂದ ದಾವಾ ಪತ್ರ ಮತ್ತು ಸಮನ್ಸ್ ಬಂದಿದ್ದು ತಾವು ದಾವಾ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. 1 ನೇ ವಾದಿ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ವಾದಿಯ ತಂದೆ ಬಸವನಾಯಕರವರಿಗೆ ಪುಟ್ಟಮ್ಮ, ಶಿವಣ್ಣನಾಯಕ ಮತ್ತು ಚಿಕ್ಕಚೆನ್ನನಾಯಕ ಎಂಬ ಹೆಸರಿನ 03 ಜನ ಮಕ್ಕಳು ಎಂದರೆ ಸಾಕ್ಷಿಯು ಶಿವಣ್ಣನಾಯಕ ಮತ್ತು ಚಿಕ್ಕಚೆನ್ನನಾಯಕ ನನಗೆ ಗೊತ್ತು ಆದರೆ ವಾದಿ ಪುಟ್ಟಮ್ಮ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕಚೆನ್ನನಾಯಕರವರು ಬದುಕಿರುತ್ತಾರಾ ಎಂದರೆ ಸಾಕ್ಷಿಯು ಅವರು ಮರಣ ಹೊಂದಿರುತ್ತಾರೆಂದು ನುಡಿಯುತ್ತಾರೆ. ಹಾಗಾದರೆ ಚಿಕ್ಕಚೆನ್ನನಾಯಕರವರ ಹೆಂಡತಿಯ ಹೆಸರು ಏನೆಂದು ಕೇಳಲಾಗಿ ಗೋಪಮ್ಮ ಎಂದು ನುಡಿಯುತ್ತಾರೆ. ಚಿಕ್ಕಚೆನ್ನನಾಯಕ ಮತ್ತು ಗೋಪಮ್ಮರವರಿಗೆ ನಾಗೇಶ ಮತ್ತು ಬಸವರಾಜು ಎಂಬ ಹೆಸರಿನ 02 ಮಕ್ಕಳು

ಇರುತ್ತಾರೆಂದರೆ ಸರಿ. 1 ನೇ ವಾದಿ ಪುಟ್ಟಮ್ಮ ಇವರಿಗೆ ಗೋಪಮ್ಮ, ಗೋಪಾಲನಾಯಕ, ಸಣ್ಣಮ್ಮ, ಲಕ್ಷ್ಮೀ, ನಾಗಮ್ಮ ಎಂಬ 05 ಜನ ಮಕ್ಕಳು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ, ನಮ್ಮ ಊರಿನಲ್ಲಿ ಇಲ್ಲಾ ಎನ್ನುತ್ತಾರೆ. ಪುಟ್ಟಮ್ಮ ಬಸವನಾಯಕನ ಮಗಳು ಆಕೆಯನ್ನು ಸಾಗರೆ ಗ್ರಾಮಕ್ಕೆ ಮದುವೆ ಮಾಡಿತಿಕೊಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ. ಪುಟ್ಟಮ್ಮನ ಮಗಳೇ 3 ನೇ ಪ್ರತಿವಾದಿ ಗೋಪಮ್ಮ ಈಕೆಯನ್ನು ಆತನ ಸೋದರಮಾವ ಚಿಕ್ಕಚೆನ್ನನಾಯಕರವರಿಗೆ ಮದುವೆ ಮಾಡಿಕೊಟ್ಟಿರುತ್ತದೆ ಎಂದರೆ ಸಾಕ್ಷಿಯು ಚಿಕ್ಕಚೆನ್ನನಾಯಕನಿಗೆ ಮದುವೆ ಮಾಡಿಕೊಟ್ಟಿರುವುದು ನಿಜ ಆದರೆ ಆತ ಆಕೆಗೆ ಸೋದರ ಮಾವ ಎಂಬುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ವಾದಿಯರು ಸ.ನಂ. 168, ವಿಸ್ತೀರ್ಣ 03 ಎಕರೆ 25 ಗುಂಟೆ ಜಮೀನಿನ ದಕ್ಷಿಣ ಭಾಗಕ್ಕೆ ಇರುವ 02 ಎಕರೆ 07 ಗುಂಟೆಗೆ ದಾವಾ ಮಾಡಿದ್ದು, ಪೂರ್ವಕ್ಕೆ ಸದರಿ 02 ಎಕರೆ 07 ಗುಂಟೆಗೆ ಚೆಕ್ಕುಬಂದಿ ಈ ರೀತಿ ಇರುತ್ತದೆಂದು ಪೂರ್ವಕ್ಕೆ – ಬೀರನಾಯಕ, ಪಶ್ಚಿಮಕ್ಕೆ – ದೊಡ್ಡಚೆನ್ನನಾಯಕ, ಉತ್ತರಕ್ಕೆ – ರಸ್ತೆ ಮತ್ತು ದಕ್ಷಿಣಕ್ಕೆ –ಶಿವನ ಮಾದನಾಯಕರವರಿಗೆ ಸೇರಿದ ಜಮೀನು ಇದೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಚೆಕ್ಕುಬಂದಿಯ ವಿಸ್ತೀರ್ಣ 02 ಎಕರೆ 07 ಗುಂಟೆ ಜಮೀನನ್ನು ದಿನಾಂಕಃ 25.01.1965 ರಲ್ಲಿ 1 ನೇ ವಾದಿ ಪುಟ್ಟಮ್ಮ, 2 ನೇ ವಾದಿ ಶಿವಣ್ಣನಾಯಕ, 3 ನೇ ವಾದಿಯ ಗಂಡ ಚಿಕ್ಕಚೆನ್ನನಾಯಕರವರುಗಳ ತಂದೆ ಬಸವನಾಯಕ ಬಿನ್ ದೊಡ್ಡಮರಚನಾಯಕರವರು ನಿಲುವಾಗಿಲು ಗ್ರಾಮದ ವೆಂಕಟನಾಯಕರವರ ಮಕ್ಕಳಾದ ಗವಿನಾಯಕ, ವೆಂಕಟನಾಯಕ, ಸಿಂಗನಾಯಕ ಮತ್ತು ಗಿರಿನಾಯಕರವರಿಗೆ ಮೈನರ್ ಗಾರ್ಡಿಯನ್ ಆಗಿ ಗವಿನಾಯಕರವರಿಂದ ಕ್ರಯಕ್ಕೆ ಪಡೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಸದರಿ 02 ಎಕರೆ 07 ಗುಂಟೆ ವಿಸ್ತೀರ್ಣದಲ್ಲಿ ಚಿಕ್ಕಚೆನ್ನನಾಯಕರವರುಗಳ ತಂದೆ ಬಸವನಾಯಕ ಬಿನ್ ದೊಡ್ಡಮರಚನಾಯಕರವರು ಸ್ವಾಧೀನದಲ್ಲಿದ್ದು, ಅವರು ಸತ್ತ ನಂತರ ವಾದಿಯರು ಸದರಿ ಆಸ್ತಿಯಲ್ಲಿ ಸ್ವಾಧೀನ ಇರುತ್ತಾರೆಂದರೆ ಸರಿಯಲ್ಲ. ಸದರಿ ಸ.ನಂ. 168 ವಿಸ್ತೀರ್ಣ 02 ಎಕರೆ 07 ಗುಂಟೆ ಜಮೀನನ್ನು ದಿನಾಂಕಃ 10.03.1943 ರಲ್ಲಿ ನಿಲುವಾಗಿಲು ಗ್ರಾಮದ ಗವಿನಾಯಕ, ವೆಂಕಟನಾಯಕ, ಸಿಂಗನಾಯಕ ಮತ್ತು ಗಿರಿನಾಯಕ ಗವಿನಾಯಕರವರ ತಂದೆ ವೆಂಕಟನಾಯಕರವರು ವೆಂಕಟನಾಯಕ @ ಕಂಠನಾಯಕ ಮತ್ತು ಸಂಜೀವನಾಯಕನ ಹೆಂಡತಿ ದೇವಮ್ಮರವರಿಂದ ಖರೀದಿ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮಾನ್ಯ ವಾದಿಗಳ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**